(ರೋಸ್ಟರ್) ಪದ್ಧತಿ ಅನುಸರಿಸಲಾಗಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ತಹಶೀಲ್ದಾರರ ಹುದ್ದೆಗಳು-430

ಶಿರಸ್ತೇದಾರರ ಹುದ್ದೆಗಳು-1423

ಆ) ತಹಶೀಲ್ದಾರರು-

ಪರಿಶಿಷ್ಟ ಜಾತಿ-72

ಪರಿಶಿಷ್ಟ ಪಂಗಡ-3

ಶಿರಸ್ತೇದಾರರು-

ಪರಿಶಿಷ್ಟ ಜಾತಿ-174

ಪರಿಶಿಷ್ಟ ಪಂಗಡ-28

ಇ) ಹೌದು

ಮೂಡಿಗೆರೆ ತೋಟಗಾರಿಕೆ ತರಬೇತಿ ಕೇಂದ್ರ.

130 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆಯಲ್ಲಿ ತೋಟಗಾರಿಕಾ ತರಬೇತಿ ಕೇಂದ್ರವನ್ನು ಯಾವಾಗ ಸ್ಥಾಪನೆ ಮಾಡಲಾಗಿದೆ. ಹಾಗೂ ಅದರಲ್ಲಿ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳ ಸಂಖ್ಯೆ ಎಷ್ಟು

ಆ) ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳಿಗೆ, ವಸತಿ ಹಾಗೂ ಇತರ ಕನಿಷ್ಟ ಸೌಲಭ್ಯಗಳಿಲ್ಲದಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ಮೂಡಿಗೆರೆಯಲ್ಲಿ 1979-80ನೇ ಸಾಲಿನಲ್ಲಿ ತೋಟಗಾರಿಕೆ ತರಬೇತಿ ಕೇಂದ್ರವನ್ನು ಸ್ಥಾಪನೆ ಮಾಡಲಾಗಿದೆ. ಈ ತರಬೇತಿ ಕೇಂದ್ರದಲ್ಲಿ ಹಾಲಿ 35 ಅಭ್ಯರ್ಥಿಗಳು ತರಬೇತಿಯನ್ನು ಪಡೆಯುತ್ತಿದ್ದಾರೆ.

ಆ) ತಾತ್ಕಾಲಿಕ ಸೌಲಭ್ಯ ಒದಗಿಸಿದೆ.

ಮೂಡಿಗೆರೆ ತಾಲ್ಲೂಕಿನ ಕೃಷಿ ಸಹಾಯಕ ವಸತಿ ಗೃಹಗಳು

129 - ಶ್ರೀಮತಿ ಮೋಟಮ್ಮ (ಮೂಡಿಗೆರೆ): ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೂಡಿಗೆರೆ ತಾಲ್ಲೂಕಿನಲ್ಲಿ ಸರ್ಕಾರದವರು ಕೃಷಿ ಸಹಾಯಕರುಗಳಿಗಾಗಿ ನಿರ್ಮಿಸಲಾದ ವಸತಿ ಗೃಹಗಳ ಸಂಖ್ಯೆ ಎಷ್ಟು?

2) ಸದರಿ ನಿರ್ಮಾಣಕ್ಕಾಗಿ ಸರ್ಕಾರದವರು ಖರ್ಚು ಮಾಡಿದ ಹಣವೆಷ್ಟು? ಇದರಲ್ಲಿ ಎಷ್ಟು ವಸತಿ ಗೃಹಗಳ ನಿರ್ಮಾಣ ಕಾರ್ಯ ಪೂರ್ಣವಾಗಿ ಇಲಾಖೆಗೆ ವಹಿಸಲಾಗಿದೆ.

3) ಶ್ರೀಪುರ ಗ್ರಾಮದಲ್ಲಿ ಕಟ್ಟಲಾದ ಕೃಷಿ ಸಹಾಯಕರ ವಸತಿ ಗೃಹ ಅಪೂರ್ಣವಾಗಿರಲು ಕಾರಣವೇನು?

4) ಹಾಗಿದ್ದಲ್ಲಿ, ಯಾವಾಗ ಪೂರ್ಣಗೊಳಿಸಿ ಇಲಾಖೆಗೆ ವಹಿಸಕೊಡಲಾಗುವುದು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):